ಸಿಲುಕಿದರಂತೆ. ಅವಳನ್ನು ಮದುವೆಯಾದನಂತರ ಅವರು ಇಲ್ಲಿಯೇ ಸ್ಥಾಯಿಕರಾದರಂತೆ.

ನಿಕ್ ಅಂಕಲ್ ರೆಚೆಲ್ ಕಾಟೆಜಿನ ತಮ್ಮ ಟೆನಿಸ್ ಕೋರ್ಟಿಗೆ ಬಿಳಿಯ ಹಾಫ್ ಪ್ಯಾಂಟ್, ಶ್ವೇತ ಟೀ ಶರ್ಟ್, ಬಿಳಿಯ ಕಿಟ್ಟ್ ಧರಿಸಿ ಬಂದು ಟೆನಿಸ್ ಆಡುತ್ತಿದ್ದರೆ ಅವರನ್ನು ಯಾರೂ ಸ್ಕಾಟ್‌ಲ್ಯಾಂಡಿನ ರಹಿವಾಸಿ ಅಲ್ಲ ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಆರು ಅಡಿ ಎತ್ತರ, ಬಲವತ್ತರ ಮಾಂಸ ಖಂಡಗಳು, ಕಸರತ್ತು ಮಾಡಿ ಬೆಳೆಸಿದ ದೇಹದಾರ್ಢ್ಯ ಸುಂದರ ಮೈಮಾಟ ಅವರ ಫಿಟ್‌ನೆಸ್ಸಿನ ಸಾಕ್ಷಿಯಾಗಿದ್ದವು. ಬರ್ಫಿನಂತಹ ಬಿಳಿಯ ಶರೀರ, ಅದರ ಕಡು ಬಾದಾಮಿ ಬಣ್ಣದ ತಲೆಗೂದಲು ಅವರಿಗೆ ಶೋಭಿಸುತ್ತಿದ್ದವು. ನಿಕ್ ಅಂಕಲ್‌ರನ್ನು ಯಾರೂ ಆಂಗ್ಲೋ ಇಂಡಿಯನ್ ಎಂದು ಹೇಳುವಂತಿರಲಿಲ್ಲ. ಅವರು ಪಕ್ಕಾ ಬ್ರಿಟಿಷರಂತೆಯೇ ಕಾಣುತ್ತಿದ್ದರು. ಆ ಕಾಲದಲ್ಲಿ ಒಂದು ಬಹುಚರ್ಚಿತ ಇಂಗ್ಲಿಷ್ ಚಲನಚಿತ್ರ 'ರೋಮನ್ ಹಾಲಿಡೇ' ಬಂದಿತ್ತು. ಸುನೀತಿದೇವಿಗೆ ಆ ಫಿಲ್ಮಿನ ಹೀರೋ ಮೆಚ್ಚಿಕೆಯಾಗಿದ್ದ. ಪ್ರಾಯಃ ಅದರಿಂದಲೇ ಆ ಫಿಲ್ಮಿನ ಹೀರೋ ಗ್ರೆಗರಿ ಪೆಕ್‌ನ ದೊಡ್ಡದೊಂದು ಭಾವಚಿತ್ರ ತಂದು ತಮ್ಮ ಡೈನಿಂಗ್ ಹಾಲ್‌ನಲ್ಲಿ ತೂಗು ಹಾಕಿದ್ದಳು. ಸುಷಮಾಗೆ ನಿಕ್ ಅಂಕಲ್ ಗ್ರೆಗರಿ ಪೆಕ್‌ನಂತೆಯೇ ಕಾಣುತ್ತಿದ್ದರು. ಅವಳಿಗೆ ಒಂದು ದಿನ ಗೊತ್ತಾಯಿತು, ನಿಕ್ ಅಂಕಲ್ ಟೆನಿಸ್ ಆಡುತ್ತಿದ್ದುದನ್ನು ನೋಡಿಯೆ ರಿಚಿ ಆಂಟಿ ಅವರ ಮೋಹಪಾಶದಲ್ಲಿ ಬಿದ್ದಿದ್ದಳು ಅಂತ. ಅನಂತರ ಅವರಿಬ್ಬರೂ ಮದುವೆಯಾದರು. ಅದೇ ದಿನಗಳಲ್ಲಿ ಎರಡನೆಯ ಮಹಾಯುದ್ಧ

